ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ .898/2020.

ಪ್ರಾ.ಸಾ. : 9
ಚಾ.ಸಾ. : 13

ಹೆಸರು : ಮಾದಪ್ಪ ಕೆ ಎನ್
ತಂದೆಯ ಹೆಸರು : ಕೆ ಡಿ ನಂಜಪ್ಪ
ವಯಸ್ಸು : 61 ವರ್ಷ
ಉದ್ಯೋಗ : ರೈತರು
ವಿಳಾಸ : ಕುಮಟೂರು

... ....................................................................................................... ...

ದಿನಾಂಕ 20 ನೇ ಮೇ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ನಾನು ಕೊಡಗು ಜಿಲ್ಲೆಯ ಗೌರವ ವನ್ಯಜೀವಿ ಪರಿಪಾಲಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಹಾಗೂ ಮಾಜಿ ಸೈನಿಕ ಆಗಿರುತ್ತೇನೆ.

ದಿ. **03.09.2020** ರಂದು ಚಾಸಾ **20** ರವರೊಂದಿಗೆ ನಾನು ಹಾಗೂ ಚಾಸಾ **1, 11, 14** ಮತ್ತು **2** ನೇ ಆರೋಪಿರವರೊಂದಿಗೆ, ಆರೋಪಿ **2** ರವರ ಮನೆಗೆ ಬಾಳೆಲೆ ಗ್ರಾಮದ ಸೂಳುಗೋಡಿಗೆ ಹೋಗಿರುತ್ತೇನೆ. ಆರೋಪಿ **2** ಕೃತ್ಯಕ್ಕೆ ಬಳಸಿದ ಬಂಧೂಕು, **3** ಕಾಡು ತೂಸು ಹಾಗೂ ಪರವಾನಗಿಯನ್ನು ನಮಗೆ ಆರೋಪಿ **2** ತಮ್ಮ ಮನೆಯಿಂದ ತೆಗೆದುಕೊಟ್ಟರು. ತನಿಖಾಧಿಕಾರಿಗಳು ವಿಚಾರಿಸಲಾಗಿ ಆರೋಪಿ **2**, ಹತ್ತು ದಿನಗಳ ಹಿಂದೆ ಅರಣ್ಯದಲ್ಲಿ ಬೇಟೆ ಆಗಿ ಅದರ ಅವಶೇಷಗಳನ್ನು ಹೂತಿಟ್ಟಿರುವ ಸ್ಥಳವನ್ನು ತೋರಿಸುವುದಾಗಿ ತಿಳಿಸಿದರು. ಅದರಂತೆ ನಾನು ಹಾಗೂ ತನಿಖಾಧಿಕಾರಿಗಳು ಆರೋಪಿ **2** ರವರ ಮನೆಯ ಹಿಂದೆ ಹೋಗಿ ನೋಡಿದಾಗ ಆರೋಪಿ **2** ತಾನು ಹೂತಿಟ್ಟಿದ್ದ ಸ್ಥಳವನ್ನು ತೋರಿಸಿದರು. ಅದರಲ್ಲಿ ಕೆಂದಳಿಲು ಹೋಲುವಂತಹ ಕೂದಲು ಇತ್ತು. ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಮೇಲೆ ಹೇಳಿದ ವಸ್ತುಗಳು ಹಾಗೂ ಕೆಂದಳಿಲಿನ ಕೂದಲನ್ನು ಅಮಾನತುಪಡಿಸಿದರು ಆಗ ಸಹಿ ಮಾಡಿರುತ್ತೇನೆ.

ಅದೇ ದಿನ ಮ. 2.30 ರ ಸಮಯದಲ್ಲಿ ಶರಣು ಉತ್ತಪ್ಪ ನಮ್ಮ ಜೊತೆ ಇದ್ದು ಅವರನ್ನು ಕರೆದುಕೊಂಡು ಚಾಸಾ 2, 14, 3, ನಾನು ಆರೋಪಿ 3 ತೋರಿಸಿದಂತೆ ಘಟನಾ ಸ್ಥಳಕ್ಕೆ ಹೋದೆವು. ಆರೋಪಿ 3 ತಾವು 24.08.2020 ರಂದು ನಾಗರಹೊಳೆ ಹುಲಿ ಸಂರಕ್ಷಿತಾ ಅರಣ್ಯಸಂರಕ್ಷಣಾ ಪ್ರದೇಶದಲ್ಲಿ ಕೆಸುವಿನ ಹಡ್ಲುವಿನಲ್ಲಿ ತಾನು ಹಾಗೂ ಉಳಿದ ಆರೋಪಿಗಳು ಸೇರಿ ಬಂಧೂಕಿನೊಂದಿಗೆ ಹೋಗುತ್ತಿದ್ದಾಗ ಗೋಪಾಲ್ @ ರಾಜು ಎನ್ನುವವರು, ಹುಲಿಯನ್ನು ನೋಡಿ ಆರೋಪಿ 1 ಸಂತೋಷ್‌ರವರ ಕೈಗೆ ಬಂಧೂಕನ್ನು ನೀಡಿದರು. ಆನಂತರ ಆರೋಪಿ 1 ಸಂತೋಷ್ ಮುಂದೆ ಬಂದು ಹುಲಿಗೆ ಗುಂಡು ಹಾರಿಸಿದರು ಎಂದು ತಿಳಿಸಿದರು. ಆನಂತರ ತಾನು ಮತ್ತು ಇತರೇ ಆರೋಪಿತರು ಹತ್ತಿರ ಹೋಗಿ ನೋಡಲಾಗಿ ಹುಲಿ ಮೃತರಾಗಿರುವುದು ತಿಳಿಯಿತು ಎಂದು ತಿಳಿಸಿದರು. ಆನಂತರ ಎಲ್ಲರೂ ಸೇರಿ ಕತ್ತಿಯಿಂದ ಹುಲಿಯ ಕೈ ಮತ್ತು ಕಾಲಿನಿಂದ ಉಗುರುಗಳನ್ನು ಬೇರ್ಪಡಿಸಿದೆವು, ಹಲ್ಲುಗಳನ್ನು ಬೇಪರ್ಡಿಸಿದೆವು. ಆನಂತರ ಹುಲಿಯ ಕೈ, ಕಾಲುಗಳನ್ನು ಬೇರ್ಪಡಿಸಿ ಪಶ್ಚಿಮ ದಿಕ್ಕಿಗೆ ಎಸೆದೆವು ಎಂದ ತಿಳಿಸಿದರು. ಆರೋಪಿ 3 ಮುಂದುವರೆದು ತಾವೆಲ್ಲರೂ ಸೇರಿ ಜಿಂಕೆಯನ್ನು ಬೇಟೆ ಆಡಿ ಮಾಂಸವನ್ನು ಹಂಚಿಕೊಂಡಿದ್ದಾಗಿ ತಿಳಿಸಿದರು. ಆಗ ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿದರು. ನಾನು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಅದೇ ದಿನ ಸಂಜೆ 5 ಗಂಟೆಗೆ ತನಿಖಾಧಿಕಾರಿಗಳಿಗೆ ಬಂದ ಬಾತ್ಮಿದಾರರ ಖಚಿತ ಮಾಹಿತಿಯಂತೆ ಆರೋಪಿ 5 ರಾಜು ಮನೆಯಲ್ಲಿ ಇರುವುದು ತಿಳಿದು ಬಂದು ಅಲ್ಲಿಗೆ ನಾನು, ಚಾಸಾ 2, 14, 3, ಹೋದೆವು. ಆರೋಪಿ 5 ಮನೆಯಲ್ಲಿದ್ದು, ತನಿಖಾಧಿಕಾರಿಗಳು ವಿಚಾರಿಸಿದಾಗ ತನ್ನ ಹೆಸರು ರಾಜು ಎಂದು ತಿಳಿಸಿದರು, ಇಲಾಖೆಯವರು ಸಹ ಅವರನ್ನು ಗುರುತಿಸಿದರು. ಆಗ ಆರೋಪಿ 5 ಮುಂದುವರೆದು ತಾನು ಇತರೇ 4 ಜನ ಆರೋಪಿತರೊಂದಿಗೆ ಸೇರಿ 24.08.2020 ರಂದು ನಾಗರಹೊಳೆ ಹುಲಿ ಸಂರಕ್ಷಿತಾ ಅರಣ್ಯಸಂರಕ್ಷಣಾ ಪ್ರದೇಶದಲ್ಲಿ ಕೆಸುವಿನ ಹಡ್ಲುವಿನಲ್ಲಿ ತಾನು ಹಾಗೂ ಉಳಿದ ಆರೋಪಿಗಳು ಸೇರಿ ಬಂದೂಕಿನೊಂದಿಗೆ ಹೋಗುತ್ತಿದ್ದಾಗ ರಾಜು ಎನ್ನುವವರು, ಹುಲಿಯನ್ನು ನೋಡಿ ಆರೋಪಿ 1 ಸಂತೋಷ್‌ರವರ ಕೈಗೆ ಬಂಧೂಕನ್ನು ನೀಡಿದರು. ಆನಂತರ ಆರೋಪಿ 1 ಸಂತೋಷ್ ಮುಂದೆ ಬಂದು ಹುಲಿಗೆ

ಗುಂಡು ಹಾರಿಸಿದರು ಎಂದು ತಿಳಿಸಿದರು. ಆನಂತರ ತಾನು ಮತ್ತು ಇತರೇ ಆರೋಪಿತರು ಹತ್ತಿರ ಹೋಗಿ ನೋಡಲಾಗಿ ಹುಲಿ ಮೃತರಾಗಿರುವುದು ತಿಳಿಯಿತು ಎಂದು ತಿಳಿಸಿದರು. ಆನಂತರ ಎಲ್ಲರೂ ಸೇರಿ ಕತ್ತಿಯಿಂದ ಹುಲಿಯ ಕೈ ಮತ್ತು ಕಾಲಿನಿಂದ ಉಗುರುಗಳನ್ನು ಬೇರ್ಪಡಿಸಿದೆವು, ಹಲ್ಲುಗಳನ್ನು ಬೇಪರ್ಡಿಸಿದೆವು. ಆನಂತರ ಹುಲಿಯ ಕೈ, ಕಾಲುಗಳನ್ನು ಬೇರ್ಪಡಿಸಿ ಪಶ್ಚಿಮ ದಿಕ್ಕಿಗೆ ಎಸೆದೆವು ಎಂದ ತಿಳಿಸಿದರು. ಆರೋಪಿ 5 ಮುಂದುವರೆದು ತಾವೆಲ್ಲರೂ ಸೇರಿ ಜಿಂಕೆಯನ್ನು ಬೇಟೆ ಆಡಿ ಮಾಂಸವನ್ನು ಹಂಚಿಕೊಂಡಿದ್ದಾಗಿ ತಿಳಿಸಿದರು. ಆರೋಪಿ 5 ತನ್ನ ಪ್ಯಾಂಟ್ ಜೇಬಿನಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಹುಲಿಯ ಉಗುರುಗಳನ್ನು ಇಟ್ಟಿರುವುದಾಗಿ ತಿಳಿಸಿ ಅವುಗಳನ್ನು ತೆಗೆದುಕೊಟ್ಟರು. ಕೃತ್ಯಕ್ಕೆ ಬಳಿಸಿದ 3 ಶೆಲ್‌ನ ಒಂದು ಸ್ಟೀಲ್ ಟಾರ್ಚ್ ಅನ್ನು ಹಾಜರುಪಡಿಸಿದರು. ಆಗ ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಿ ಹುಲಿಯ 2 ಉಗುರು ಹಾಗೂ ಟಾರ್ಚ್ ಅನ್ನು ಅಮಾನತುಪಡಿದರು. ನಾನು ಸಹ ಮಹಜರ್‌ಗೆ ಸಹಿ ಮಾಡಿರುತ್ತೇನೆ. ಹುಲಿಯ ಮರಣೋತ್ತರ ದಿನವೂ ಸಹ ನಾನು ಹಾಜರಿದ್ದೆ. ಆ ದಿನ ವೈದ್ಯರು ಮರಣೋತ್ತರ ಪರೀಕ್ಷೆ ಮಾಡುವಾಗ ಹುಲಿಯ ಚರ್ಮದಿಂದ ಒಂದು ಗುಂಡನ್ನು ಹಾಗೂ ಚರ್ಮದ ತುಂಡನ್ನು ಬೇರ್ಪಡಿಸಿ ತನಿಖಾಧಿಕಾರಿಗಳಿಗೆ ನೀಡಿದರು. ತನಿಖಾಧಿಕಾರಿಗಳು ಅವುಗಳನ್ನು ಎಫ್. ಎಸ್. ಎಲ್‌ಗೆ ಕಳುಹಿಸಿದರು. ಆನಂತರ ಹುಲಿಯ ಕಳೆಬರಹವನ್ನು ಸುಡಲಾಯಿತು. ಆದಿನವೂ ಸಹ ಮಹಜರ್‌ಗೆ ಸಹಿ ಮಾಡಿರುತ್ತೇನೆ. ದಿ. 10.09.2020 ರಂದು ಅರಣ್ಯ ಸಂರಕ್ಷಣಾಧಿಕಾರಿ ಸಮ್ಮುಖದಲ್ಲಿ ಈ ಪ್ರಕರಣದ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ನಿ ಪಿ 9 ಸ್ಥಳ ಮಹಜರ್‌ನಲ್ಲಿ ಸಾಕ್ಷಿ ಸಹಿಯನ್ನು ನಿ ಪಿ 9 ಬಿ ಎಂದು ಗುರುತಿಸಲಾಯಿತು. ನಿ ಪಿ 10 ರಿಂದ 11 ಅನ್ನು ನೋಡಿ ಗುರುತಿಸಿರುತ್ತಾರೆ. ನಿ ಪಿ 12 ಆರೋಪಿ 5 ರವರ ಮನೆಯಲ್ಲಿ ಮಾಡಿದ ಮಹಜರ್ ನಲ್ಲಿ ಸಾಕ್ಷಿ ಸಹಿಯನ್ನು ನಿ ಪಿ 12 ಬಿ ಎಂದು ಗುರುತಿಸಲಾಯಿತು. ನಿ ಪಿ 13 ಮತ್ತು 14 ಅನ್ನು ನೋಡಿ ಗುರುತಿಸಿರುತ್ತಾರೆ. ನಿ ಪಿ 18 ರಿಂದ ನಿ ಪಿ 26 ಫೋಟೋ ಮತ್ತು ಸಿ. ಡಿ. ಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 2 ರವರ ಮನೆಯಲ್ಲಿ ಮಾಡಿದ ಮಹಜರ್ ಅನ್ನು ನಿ ಪಿ 40 ಎಂದು, ಸಾಕ್ಷಿ ಸಹಿಯನ್ನು ನಿ ಪಿ 40 ಎ ಎಂದು ಗುರುತಿಸಲಾಯಿತು. ಹುಲಿಯ ಕಳೆಬರಹದ ಸುಟ್ಟ

ಫೋಟೋಗಳನ್ನು ನಿ ಪಿ 41 ಎಂದು ಗುರುತಿಸಲಾಯಿತು. ಹುಲಿಯ ಕಳೆಬರಹವನ್ನು ಸುಡುವಾಗ ಮಾಡಿದ ಮಹಜರ್ ಅನ್ನು ನಿ ಪಿ 42 ಎಂದು, ಸಾಕ್ಷಿ ಸಹಿಯನ್ನು ನಿ ಪಿ 42 ಎ ಎಂದು ಗುರುತಿಸಲಾಯಿತು. Post mortom committy for disposal of siezed tiger organs ದಾಖಲಾತಿಯನ್ನು ನಿಪಿ 43 ಎಂದು, ಸಾಕ್ಷಿ ಸಹಿಯನ್ನು ನಿ ಪಿ 43 ಎ ಎಂದು ಗುರುತಿಸಲಾಯಿತು. ಸ್ಟೀಲ್ ಟಾರ್ಚ್ ಅನ್ನು ಮು. ಮಾ 15 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.

ನಾನು 15 ವರ್ಷದಿಂದ ಕೊಡಗಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನನ್ನ ಸಹಪಾಠಿಜೊತೆ ಸೇರಿ ಎನ್.ಜಿ.ಓ ನೋಂದಣಿ ಮಾಡಿಸಿದ್ದೇವೆ ಎಂದರೆ ಸಹಪಾಠಿಗಳು ಅಲ್ಲ ಎಲ್ಲರೂ ಸೇರಿ ನೋಂದಣಿ ಮಾಡಿಸಿದ್ದೇವೆ ಎನ್ನುತ್ತಾರೆ. ಕೊಡಗು ಜಿಲ್ಲೆಯಲ್ಲಿ ಅರಣ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣ ಆದರೂ ನಮ್ಮನ್ನು ಅರಣ್ಯ ಇಲಾಖೆಯವರು ಕರೆಯುತ್ತಾರೆ ಎಂದರೆ ಸರಿ. ಅಂತಹ ಸಂದರ್ಭಗಳಲ್ಲಿ ನಾವು ಸಹ ಅರಣ್ಯ ಇಲಾಖೆಯವರು ಕರೆದಾಗ ಹೋಗುತ್ತೇವೆ ಎಂದರೆ ಸರಿ. ಎನ್.ಜಿ.ಓ ಯಿಂದ ನಮಗೆ ಸಾಕಷ್ಟು ಹಣಕಾಸು ಬರುತ್ತಿತ್ತು ಎಂದರೆ ಸರಿಯಲ್ಲ. ಸಾರ್ವಜನಿಕರು, ಅರಣ್ಯ ಇಲಾಖೆಯವರಿಗೆ, ಸಹಕರಿಸದಿದ್ದಾಗ ನಮ್ಮನ್ನು ಕರೆಯುತ್ತಾರೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ 5 ಸಹಿ ಮಾಡಿದ್ದೇನೆ. ಯಾವ ಯಾವ ವಿಚಾರಗಳಿಗೆ ಸಂಬಂಧಿಸಿದಂತೆ ಸಹಿ ಮಾಡಿದ್ದೇನೆ ಎಂಬ ಬಗ್ಗೆ ನನಗೆ ಯೋಚನೆ ಇದೆ, ಮೇಲೆ ಮುಖ್ಯ ವಿಚಾರಣೆಯಲ್ಲಿ ಸದರಿ ವಿಚಾರಗಳನ್ನು ಹೇಳಿದ್ದೇನೆ.

ದಿ. 03.09.2020 ರಂದು ಮಾಡಿದ ಮಹಜರ್ ಸ್ಥಳದ ಚೆಕ್ಕು ಬಂಧಿ ಈಗ ಯೋಚನೆ ಇಲ್ಲ. ನಾನು ಸ್ಥಳಕ್ಕೆ ಹೋಗದ ಕಾರಣ ಹಾಗೂ ಇಲಾಖೆಯವರು ಸ್ಥಳದಲ್ಲಿ ಮಹಜರ್ ಮಾಡದ ಕಾರಣ ನನಗೆ ಚೆಕ್ಕು ಬಂಧಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಕಾಡುತೂಸು Indian Ordinance factory ಕಂಪನಿಗೆ ಸೇರಿದ್ದು, ಕೆಂಪು ಬಣ್ಣದಿಂದ ಕೂಡಿದ್ದು, ಕಪ್ಪು ಬಣ್ಣದಲ್ಲಿ ಬರೆದಿದ್ದರು. ಮಹಜರ್ ನಲ್ಲಿ ಕಂಪನಿಯ ಹೆಸರು ನಮೂದು ಮಾಡಿರುವುದಿಲ್ಲ. ಟಾರ್ಚ್

ಮೇಲೆ ಜೀಪ್ ಎಂದು ಬರೆದಿತ್ತು ನಿಖರವಾಗಿ ಯಾವ ಕಂಪನಿಗೆ ಸೇರಿದ್ದು ಎಂದು ಗೊತ್ತಿಲ್ಲ. ನಾನು ಯಾವುದೇ ಆರೋಪಿ ಮನೆಗೆ ಹೋಗಿಲ್ಲ, ಹಾಗೂ ನನ್ನ ಸಮಕ್ಷಮ ಮು. ಮಾ ಗಳನ್ನು ಅಮಾತನುಪಡಿಸಿಲ್ಲ, ಆದ ಕಾರಣ ನನಗೆ ಸದರಿ ವಿಚಾರಗಳ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿ ಮನೆಯಲ್ಲಿ ಫೋಟೋಗಳನ್ನು ತೆಗೆದರು ಇಲ್ಲವೋ ಯೋಚನೆ ಇಲ್ಲ, ನಾನು ಫೋಟೋದಲ್ಲಿ ಇದ್ದೇನೆ ಎನ್ನುತ್ತಾರೆ. ಫೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಬಂಧೂಕು ನೋಡಿದ್ದೇನೆ, ಆದರೆ ಯಾವ ಕಂಪನಿಗೆ ಸೇರಿದ್ದು ಎಂದು ಗೊತ್ತಿಲ್ಲ ಎನ್ನುತ್ತಾರೆ. ಮಹಜರ್ ನಲ್ಲಿ ಕಂಪನಿಯ ಹೆಸರನ್ನು ನಮೂದಿಸಿಲ್ಲ ಎನ್ನುತ್ತಾರೆ. ಆ ದಿನ ಯಾವುದೇ ಬಂಧೂಕನ್ನು ಅಮಾನತುಪಡಿಸಿಲ್ಲ, ಆದ ಕಾರಣ ನನಗೆ ಕಂಪನಿ ಹೆಸರು ನೆನಪಿಲ್ಲ ಎಂದರೆ ಸರಿಯಲ್ಲ.

ಪ್ಯಾಂಟ್ ಜೇಬಿನಲ್ಲಿ ಸಿಕ್ಕ ಉಗುರು ಹುಲಿಯದ್ದು ಎಂದು ಅರಣ್ಯ ಇಲಾಖೆಯವರು ತಿಳಿಸಿದ ಕಾರಣ ನನಗೆ ತಿಳಿಯಿತು ಎಂದರೆ ಸರಿ. ಆ ದಿನ ನಾನು ಹೇಳಿದಂತೆ ಹುಲಿಯ ಉಗುರು ಆರೋಪಿಯ ಮನೆಯಲ್ಲಿ ಪ್ಯಾಂಟ್ ಜೇಬಿನಲ್ಲಿ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಯವರು ಈ ಪ್ರಕರಣಕ್ಕಾಗಿ ಉಗುರುಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಎನ್. ಜಿ. ಓ ಸಂಸ್ಥೆ ದೇಶದದ್ಯಾಂತ ಶಾಖೆಗಳನ್ನು ಹೊಂದಿದೆ ಎಂದರೆ ಸರಿಯಲ್ಲ, ಕೊಡಗಿಗೆ ಮಾತ್ರ ಸೀಮಿತ ಎನ್ನುತ್ತಾರೆ ನಾನು ಅರಣ್ಯ ಇಲಾಖೆಯವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಎನ್. ಜಿ. ಓ ಕೆಲಸದಲ್ಲಿ ಸಕ್ರಿಯವಾಗಿದ್ದೇನೆ ಎಂದು ತೋರಿಸಲು ಅರಣ್ಯ ಇಲಾಖೆಯವರ ಜೊತೆ ಸೇರಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿಗಳನ್ನು ಅರಣ್ಯ ಇಲಾಖೆಯ ಕಚೇರಿಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದ ನಂತರ ಸಾರ್ವಜನಿಕರು ಹಾಜರಿರುವುದನ್ನು ಗಮನಿಸಿರುತ್ತೇನೆ. ಆದರೆ ನಾನು ಹೋಗುವಾಗ ಒಬ್ಬನೇ ಹೋಗಿರುತ್ತೇನೆ. ಸಾರ್ವಜನಿಕರು ಫೋಟೋ ತೆಗೆದಿರುವುದಿಲ್ಲ ಎನ್ನುತಾರೆ. ಆದಿನ ಮಹಜರ್ ಸ್ಥಳದಲ್ಲಿ ಸಾರ್ವಜನಿಕರು ಹಾಜರಿಲ್ಲದ ಕಾರಣ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಕ್ಕೂ, ಈ ಪ್ರಕರಣಕ್ಕೂ, ಮು ಮಾ ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆದಿನ ನಾನಗಲಿ ಅರಣ್ಯ ಇಲಾಖೆಯವರಾಗಲಿ, ಸಾರ್ವಜನಿಕರಾಗಲಿ, ಸ್ಥಳಕ್ಕೆ ಹೋಗಿಲ್ಲ ಎಂದರೆ

ಸರಿಯಲ್ಲ. ನಾನು ಹೇಳಿದಂತೆ ಹುಲಿಯ ಅವಶೇಷಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)